ಇ) ಜೀಪ್ ೧
ಬಂದೂಕುಗಳು ೩
ವೈರ್‌ಲೆಸ್ ಸೆಟ್ ೧
ವಾಕಿಟಾಕಿ ೨

ಈ) ೧೯೮೪ರಲ್ಲಿ ಗಣತಿ ಮಾಡಿರುವ ಪ್ರಕಾರ ಪ್ರಾಣಿಗಳ ಸಂಖ್ಯೆ ಈ ಕೆಳಕಂಡಂತಿವೆ :—

೧. ಆನೆ — ೯೦೦
೨. ಹುಲಿ — ೨೬
೩. ಚಿರತೆ — ೨೯
೪. ಬೆಕ್ಕಿನ ಜಾತಿಗೆ ಸೇರಿದ ಇನ್ನಿತರ ಪ್ರಾಣಿಗಳು — ೧೧
೫. ಕಾಡೆಮ್ಮೆಗಳು — ೪೫೩
೬. ಜಿಂಕೆ } ಬಹಳಷ್ಟು ಸಂಖ್ಯೆಯಲ್ಲಿವೆ, ಆದರೆ
೭. ಕಡವೆ } ಅವುಗಳ ಗಣತಿ ಮಾಡಲಾಗಿಲ್ಲ.

ಶ್ರೀಮತಿ ಸುಮಾ ವಸಂತ.—ಲೂಟಿಯಾಗಿರುವ ಯಾವ ಪ್ರಕರಣವೂ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದು ತಪ್ಪು ಮಾಹಿತಿ ಎಂದು ನಾನು ಹೇಳಬೇಕಾಗಿರುತ್ತದೆ. ಲೂಟಿಗೆ ಅಲ್ಲಿನ ಸಿಬ್ಬಂದಿ ಕೂಡ ಶಾಮೀಲಾಗಿದ್ದಾರೆಂಬುದಾಗಿ ತಿಳಿದು ಬಂದಿದೆ. ಅಂತಹ ಸಿಬ್ಬಂದಿ ವರ್ಗದವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ. ಎಸ್. ದೇಶ್‌ಮುಖ್.—ಲೂಟಿ ಮಾಡಿಲ್ಲ. ಅದು ರಿಸರ್ವ್ ಫಾರೆಸ್ಟ್. ಚೆಕ್ ಪೋಸ್ಟ್ ಇರುತ್ತದೆ. ಆಲ್ಲಿ ಒಳಗಡೆ ಹೋಗಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಲೂಟಿಯಾಗುತ್ತಿದೆ ಎಂಬುದಾಗಿ ಹೇಳುತ್ತಿದ್ದಾರೆ. ಅಂತಹ ಯಾವ ಪ್ರಕರಣ ಎಂಬುದನ್ನು ನನ್ನ ಗಮನಕ್ಕೆ ತಂದರೆ ತಕ್ಷಣ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀಮತಿ ಸುಮಾ ವಸಂತ.—ಅಲ್ಲಿರತಕ್ಕ ಸಿಬ್ಬಂದಿ ವರ್ಗ ಫಾರೆಸ್ಟ್ ಒಳಗೆ ಹೋಗಿ ಚೆಕ್ ಮಾಡುತ್ತಿದ್ದಾರೆ. ಅಲ್ಲಿ ಫಾರೆಸ್ಟ್ ಮರಗಳನ್ನು ಸಾಗಿಸುವಾಗ ದ್ರೋಣ ಎಂಬ ಆನೆಯ ದಂತ ಮುರಿದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಆದರ ಬಗ್ಗೆ ತಾವು ಏನು ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀ ಜೆ. ಎಸ್. ದೇಶ್‌ಮುಖ್.—ಆದು ಇದುವರೆವಿಗೂ ನನ್ನ ಗಮನಕ್ಕೆ ಬಂದಿಲ್ಲ. ಆದನ್ನು ಪರಿಶೀಲನೆ ಮಾಡುತ್ತೇನೆ.

ಶಿಕಾರಿಪುರ ತಾಲ್ಲೂಕಿನ ಹರಿಜನ ಬಸ್ತಿಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ

೧೦೯೩. **ಶ್ರೀ ಬಿ. ಎಸ್. ಯಡಿಯೂರಪ್ಪ** (ಶಿಕಾರಿಪುರ).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನ ಹರಿಜನ ಬಸ್ತಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಮಂಜೂರಾಗಿರುವ ಗ್ರಾಮಗಳು ಯಾವುವು ?

ಆ) ಆ ಪೈಕಿ ಈವರೆಗೆ ವಿದ್ಯುಚ್ಛಕ್ತಿ ಒದಗಿಸಿರುವ ಗ್ರಾಮಗಳು ಯಾವುವು ?

ಇ) ವಿದ್ಯುಚ್ಛಕ್ತಿ ಒದಗಿಸುವ ಸಂದರ್ಭದಲ್ಲಿ ಹರಿಜನ ಬಸ್ತಿ ತುದಿವರೆಗೆ ವಿದ್ಯುತ್ ಕಂಬ ಹಾಕದೇ ಯಿರುವುದು ನಿಜವೇ ?

ಈ) ಈಗ ಹಾಲಿ ವಿದ್ಯುಚ್ಛಕ್ತಿ ಒದಗಿಸಲು ಕೆಲಸ ಮಾಡುತ್ತಿರುವ ಗ್ರಾಮಗಳು ಯಾವುವು ?

ಉ) ಉಳಿದ ಗ್ರಾಮಗಳಿಗೆ ಯಾವಾಗ ವಿದ್ಯುಚ್ಛಕ್ತಿ ಒದಗಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮಂತ್ರಿ ವಿದ್ಯುಚ್ಛಕ್ತಿ ಮಂತ್ರಿಗಳು) :—

ಅ) ೪೩ ಹರಿಜನ ಬಸ್ತಿಗಳು. ವಿವರಗಳನ್ನು ಅನುಬಂಧ–೧ರಲ್ಲಿ ಕೊಟ್ಟಿದೆ.

ಆ) ೨೮–೨–೧೯೮೭ರವರೆಗೆ ೧೦ ಹರಿಜನ ಬಸ್ತಿಗಳಂ. ವಿವರಗಳನ್ನು ಅನುಬಂಧ–೨ರಲ್ಲಿ ಕೊಟ್ಟಿದೆ.

ಇ) ಅಂಚೆಕೊಪ್ಪದಲ್ಲಿ ಒಂದು ಕಂಬ ಹಾಕಬೇಕಾಗಿದೆ. ಇದನ್ನು ನಾಲ್ಕೈದಂ ದಿನಗಳಲ್ಲಿ ಹಾಕ ಲಾಗುತ್ತದೆ.

ಈ) ಈಗ ಕಾರ್ಯವನ್ನು ಕೈಗೆತ್ತಿಕೊಂಡಿಲ್ಲ.

ಉ) ಉಳಿದಿರುವ ೩೩ ಹರಿಜನ ಬಸ್ತಿಗಳಿಗೆ ಆರ್ಥಿಕ ಲಭ್ಯತೆಯನ್ನಾಧರಿಸಿ ೧೯೮೭–೮೮ ರಲ್ಲಿ ವಿದ್ಯುತ್ ಪೂರೈಸಲು ಪ್ರಯತ್ನಿಸಲಾಗುವುದು.

ಅನುಬಂಧ–೧

೧೯೮೬–೮೭ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ಮಂಜೂರು ಆಗಿರುವ ಹರಿಜನ ಬಸ್ತಿಗಳಂ

ಕ್ರಮ ಸಂಖ್ಯೆ	ಹರಿಜನ ಬಸ್ತಿಯ ಹೆಸರು	ಹಳ್ಳಿಯ ಹೆಸರು
೧	೨	೩
೧	ಎ. ಕೆ ಕಾಲೋನಿ	ಹೊತನಕಟ್ಟೆ
೨	ಎ. ಕೆ. ಕಾಲೋನಿ	ಮಂಡಸಿದ್ದಾಪುರ
೩	ಎ. ಕೆ. ತಾಂಡ	ಹಿರಿಕಲಾವಧಿ
೪	ಎ. ಕೆ. ಕಾಲೋನಿ	ಸೆಟ್ಟಿಹಳ್ಳಿ
೫	ಭೋವಿ ಕಾಲೋನಿ	ಅಮಟೇಕೊಪ್ಪ
೬	ಎ. ಕೆ. ಕಾಲೋನಿ	ತಾಡಗಾನಿ
೭	ಎ. ಕೆ. ಕಾಲೋನಿ	ಹುಲಿಗೆರೆಕೊಪ್ಪ
೮	ಎ. ಕೆ. ಕಾಲೋನಿ	ಮುತಿಗಿ
೯	ಎ. ಕೆ. ಕಾಲೋನಿ	ಚಿಕ್ಕಜನಾಬರ್
೧೦	ಎ. ಕೆ. ಕಾಲೋನಿ	ಹಿರೆಜಂಬೂರ್
೧೧	ಹರಿಜನ ಕಾಲೋನಿ	ಟೆಲೆಗುಂಡ
೧೨	ಹರಿಜನ ಬಸ್ತಿ	ಬೆಳಗಾಂ
೧೩	ಹರಿಜನ ಕಾಲೋನಿ	ಗುಡ್ಡದಹೊಸಹಳ್ಳಿ
೧೪	ಎ. ಕೆ. ಕಾಲೋನಿ	ಗುಡ್ಡದಹೊಸಹಳ್ಳಿ
೧೫	ಎ. ಕೆ. ಕಾಲೋನಿ	ಕೇವಾಲಿ
೧೬	ಎ. ಕೆ. ಕಾಲೋನಿ	ಮಲ್ಲೇನಹಳ್ಳಿ
೧೭	ಎ. ಕೆ. ಕಾಲೋನಿ	ಮಳವಳ್ಳಿ
೧೮	ಬೋವಿ ಕಾಲೋನಿ	ಕಾಗಿಕೊಪ್ಪ
೧೯	ಬೋವಿ ಕಾಲೋನಿ	ಕೊರಟಕೆರೆ
೨೦	ಹರಿಜನ ಬಸ್ತಿ	ಸೆರೆಹಳ್ಳಿ
೨೧	ಎ. ಕೆ. ಕಾಲೋನಿ	ಬಿಲಕಿ
೨೨	ಎ. ಕೆ. ಕಾಲೋನಿ	ಇಟ್ಟಿಗೆಹಳ್ಳಿ
೨೩	ಎ. ಕೆ. ಕಾಲೋನಿ	ದೂಪದಹಳ್ಳಿ
೨೪	ಎ. ಕೆ. ಕಾಲೋನಿ	ಚನ್ನಹಳ್ಳಿ

೨೫	ಎ. ಕೆ. ಕಾಲೋನಿ	ಸಿರಗಿಹಳ್ಳಿ
೨೬	ಎ. ಕೆ. ಕಾಲೋನಿ	ಮುತ್ತಿಕೋಟೆ
೨೭	ಚೌಡನಾರಾಯಣಕೊಪ್ಪ	ಪುರೀವಲ್ಲಿ
೨೮	ಎ. ಕೆ. ಕಾಲೋನಿ	ಪುರೀವಲ್ಲಿ
೨೯	ಹರಿಜನ ಬಸ್ತಿ	ಕಗಿನಹಳ್ಳಿ
೩೦	ಹರಿಜನ ಬಸ್ತಿ	ಬಾಲೂರ್
೩೧	ಹರಿಜನ ಬಸ್ತಿ	ಗೊಗ್ಗರ
೩೨	ಜಕ್ಕನಕೊಪ್ಪ ಹೆಚ್. ಜಿ	ಜಕ್ಕನಕೊಪ್ಪ
೩೩	ನಲಿನಿಕೊಪ್ಪ ಹೆಚ್. ಬಿ.	ನಲಿನಿಕೊಪ್ಪ
೩೪	ಎ. ಕೆ. ಕಾಲೋನಿ	ಹಿತಲ
೩೫	ತಾಂಡ	ಹಿತಲ
೩೬	ಹರಿಜನ ಬಸ್ತಿ	ಅರಸಿನಗೆರೆ
೩೭	ಚಿಕ್ಕಸಾಲೂರ್. ಎ. ಕೆ. ಕಾಲೋನಿ	ಸಾಲೂರು
೩೮	ಎ. ಕೆ. ಕಾಲೋನಿ	ಗ್ರಾಮ
೩೯	ಭದ್ರಾಪುರ ಹೆಚ್. ಬಿ.	ಭದ್ರಾಪುರ
೪೦	ಭದ್ರಾಪುರ ಹೆಚ್. ಬಿ.	ಭದ್ರಾಪುರ
೪೧	ಎ. ಕೆ. ಕಾಲೋನಿ	ಚಿಕ್ಕಗೋಗಿಹಳ್ಳಿ
೪೨	ಎ. ಕೆ. ಕಾಲೋನಿ	ಇಸ್ಕೂರ್
೪೩	ದೊಡ್ಡಜೋಗಿಹಳ್ಳಿ	ದೊಡ್ಡಜೋಗಿಹಳ್ಳಿ

ಅನುಬಂಧ–೨

ವಿದ್ಯುಚ್ಛಕ್ತಿ ಒದಗಿಸಿರುವ ಹರಿಜನ ಬಸ್ತಿಗಳು

ಕ್ರಮ ಸಂಖ್ಯೆ	ಹಳ್ಳಿಯ ಹೆಸರು	ಹರಿಜನ ಬಸ್ತಿಯ ಹೆಸರು	ವಿದ್ಯುದ್ದೀಕರಣವಾದ ದಿನಾಂಕ
೧	೨	೩	೪
೧	ಶೆಟ್ಟಿಹಳ್ಳಿ	ಎ. ಕೆ. ಕಾಲೋನಿ	೩–೧೧–೮೬
೨	ಅನಂಟಿಕೊಪ್ಪ	ಬೋವಿ ಕಾಲೋನಿ	೫–೧೨–೮೬
೩	ತಾಡಗೋಣಿ	ಎ. ಕೆ. ಕಾಲೋನಿ	೨೮–೧–೮೫
೪	ಹಿರಾಜಂಬೂರ್	ಎ ಕೆ. ಕಾಲೋನಿ	೧೦–೧೨–೮೫
೫	ಹೊತನಕಟ್ಟೆ	ಎ. ಕೆ. ಕಾಲೋನಿ	೧೫–೮–೮೬
೬	ಬೆಳಗಾವಿ	ಹರಿಜನ ಬಸ್ತಿ	೧೫–೮–೮೫
೭	ಚನ್ನಾಪ್ಲಿ	ಎ. ಕೆ ಕಾಲೋನಿ	೧೦–೧೨–೮೪
೮	ವಂರಾವಲ್ಲಿ	ಎ. ಕೆ. ಕಾಲೋನಿ	೮–೧೨–೮೬
೯	ಭದ್ರಾಪುರ	ಬೋವಿ ಕಾಲೋನಿ	೨೮–೧೨–೮೫
೧೦	ಚಿಕ್ಕಜೋಗಿಹಳ್ಳಿ	ಎ. ಕೆ. ಕಾಲೋನಿ	೩–೧೨–೮೬

ಶ್ರೀ ಬಿ. ಎಸ್. ಯಡಿಯೂರಪ್ಪ.—ಸಾಮಾನ್ಯವಾಗಿ ಹರಿಜನ ಬಸದಿಗಳಲ್ಲಿ ಹೊಸದಾಗಿ ವಿದ್ಯುಚ್ಛಕ್ತಿ ಸಂಪರ್ಕವನ್ನು ಕಲ್ಪಿಸುವ ಸಂದರ್ಭದಲ್ಲಿ ಏನಾಗುತ್ತದೆ ಎಂಬುದನ್ನು ಹೇಳುತ್ತೇನೆ. ಹರಿಜನ ಕೇರಿಗಳಲ್ಲಿ ಈ ಕಡೆ ನಾಲ್ಕು ಮನೆಗಳು ಇರುತ್ತವೆ. ಆ ಕಡೆ ನಾಲ್ಕು ಮನೆಗಳಿರುತ್ತವೆ. ಆ ನಾಲ್ಕು ಮನೆಗಳ ಮಧ್ಯದಲ್ಲಿ ಕಟ್ಟಡಗಳನ್ನು ಹಾಕಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಆದರೆ ಇಲಾಖೆಯವರು ಆ ರೀತಿ ಮಾಡುತ್ತಿಲ್ಲ. ಅದರ ಬಗ್ಗೆ ಸಾಕಷ್ಟು ಸಾರಿ ತಮ್ಮ ಗಮನಕ್ಕೆ ತಂದಿದ್ದೇನೆ. ಮೂರು ತಿಂಗಳ ಹಿಂದೆ ಆಮೆಟ್ಟಿಕೊಪ್ಪ ಎಂಬಲ್ಲಿ ಈ ತರಹ ಕಂಬಗಳನ್ನು ಹಾಕುತ್ತಿರಬೇಕಾದರೆ ಸ್ಥಳದಲ್ಲೇ ನಿಂತು ಇಲ್ಲೇ ಕಂಬಗಳನ್ನು ಹಾಕಬೇಕೆಂದು ಹೇಳಿದರೂ ಇದುವರೆವಿಗೂ ಅಲ್ಲೆ ಕಂಬಗಳನ್ನು ಹಾಕೇ ಇಲ್ಲ. ಅದರ ಬಗ್ಗೆ ಕಟ್ಟುನಿಟ್ಟಾದ ಆದೇಶವನ್ನು ಅಧಿಕಾರಿಗಳಿಗೆ ನೀಡುತ್ತೀರಾ ? ಹೊಸದಾಗಿ ಹರಿಜನ ಬಸದಿಗಳಿಗೆ ವಿದ್ಯುತ್‌ನ್ನು ಒದಗಿಸುವಾಗ ಇರತಕ್ಕಂತಹ ರೂಲ್ಸ್‌ನ್ನು ಸ್ವಲ್ಪ ಬದಲಾವಣೆ ಮಾಡಿಕೊಂಡು ಅಗತ್ಯ ಇರುವಷ್ಟು ಕಂಬಗಳನ್ನು ಹಾಕಿಂವ ಬಗ್ಗೆ ಅಧಿಕಾರಿಗಳಿಗೆ ಆದೇಶವನ್ನು ನೀಡುತ್ತೀರಾ ? ನಂತರ ಮೈನ್ ಲೈನ್ ಏನಿದೆ ಇದರ ಬಗ್ಗೆ ಹೇಳುವುದಾದರೆ, ಇದು ಆ ಕೇರಿಗಳಿಗೆ ದೂರ ಇರುವುದರಿಂದ ಭಾಗ್ಯ ಜ್ಯೋತಿ ಯೋಜನೆ ಪ್ರಕಾರ ದೀಪಗಳನ್ನು ಹಾಕಿಸಬೇಕಾದರೆ ಅಂತರ ಜಾಸ್ತಿ ಇರುವುದರಿಂದ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗುವುದಿಲ್ಲ ಎಂಬ ದೂರು ಇದೆ. ಆದ್ದರಿಂದ ಅದರ ಬಗ್ಗೆಯೂ ಕಾನೂನನ್ನು ರಿಲ್ಯಾಕ್ಸ್ ಮಾಡಿ ಆ ಹರಿಜನರ ಮನೆಗಳಿಗೆ ವಿದುಚ್ಛಕ್ತಿಯನ್ನು ಒದಗಿಸಿ ಕೊಡುವ ಬಗ್ಗೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಎಚ್. ಪಟೇಲ್.—ವಿಚಾರ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಒಟ್ಟು ಇರುವ ೪೩ ಹರಿಜನ ಬಸದಿಗಳಲ್ಲಿ ಕೇವಲ ೧೧ಕ್ಕೆ ಮಾತ್ರ ವಿದ್ಯುತ್ ದೊರಕಿಸಲಾಗಿದೆ. ಈಗಾಗಲೇ ೧೫–೨೦ ವರ್ಷಗಳಿಂದ ಆ ಊರುಗಳಲ್ಲಿ ವಿದ್ಯುತ್ ಸಂಪರ್ಕ ದೊರೆತಿದ್ದು ಹರಿಜನ ಬಸ್ತಿಗಳಲ್ಲಿ ಅದು ಆಗದೇ ಉಳಿದಿದೆ. ಈ ವರ್ಷ ಇವುಗಳನ್ನು ಪೂರ್ಣಗೊಳಿಸಲು ಆದೇಶ ಕೊಡುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್. – ಇಂತಿಂಥ ಜಿಲ್ಲೆಯಲ್ಲಿ ತಾಲ್ಲೂಕಿನಲ್ಲಿ ಇಷ್ಟು ವಿದ್ಯುದೀಕರಣ ಮಾಡಬೇಕೆಂಬ ಟಾರ್ಜೆಟ್ ಇರುತ್ತದೆ. ಪೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿಗೆ ಈ ಬಗ್ಗೆ ಬರೆದಿರುತ್ತೇವೆ. ಮೊದಲು ನಾವು ಸ್ಯಾಂಕ್ಷನ್ ಆಗಿರತಕ್ಕ ಟಾರ್ಜೆಟ್ ಏನಿದೆ ಅದನ್ನು ಮುಗಿಸುವುದಕ್ಕೆ ಪ್ರಯತ್ನ ಪಡುತ್ತೇವೆ. ಉಳಿದ ಹಳ್ಳಿಗೆ ಆರ್ಥಿಕ ಲಭ್ಯತೆ ನೋಡಿ ಈ ವರ್ಷದಲ್ಲಿ ಆ ಕೆಲಸ ಆಗುವುದಾದರೆ ಆ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

ಪಾಂಡವಪುರ ಹಾಗೂ ನಾಗಮಂಗಲದ ತಾಲ್ಲೂಕುಗಳಲ್ಲಿ ಅಭಯಾರಣ್ಯದ ಅಭಿವೃದ್ಧಿ

೧೩೭೭. ಶ್ರೀ ಕೃಷ್ಣ (ಕೃಷ್ಣರಾಜಪೇಟೆ).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೇಲುಕೋಟೆ ಅಭಯಾರಣ್ಯದ ವಿಸ್ತೀರ್ಣ ಎಷ್ಟು, ಆ ಪೈಕಿ ಪಾಂಡವಪುರ ಮೇಲುಕೋಟೆ ಹಾಗೂ ನಾಗಮಂಗಲ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ವಿಸ್ತೀರ್ಣ ಇವೆ ?

ಆ) ಈ ಅಭಯಾರಣ್ಯದ ಅಭಿವೃದ್ಧಿಗೆ ಇದುವರೆಗೆ ಸರ್ಕಾರದವರು ಕೈಗೊಂಡಿರುವ ಕ್ರಮ ಗಳೇನು ಹಾಗೂ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ ?

ಇ) ಈ ಕಾಡಿನಲ್ಲಿ ಕೆಲವು ನೀಲಗಿರಿ ಮರಗಳನ್ನು ಮಾತ್ರ ಬೆಳೆಸಿ, ಇತರ ಅರಣ್ಯ ವೃಕ್ಷಗಳನ್ನು ಬೆಳೆಸದೇ ಇದರ ಅಭಿವೃದ್ಧಿಯನ್ನು ಕಡೆಗಣಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಈ ಅರಣ್ಯದಲ್ಲಿ ಪ್ರಕೃತಿದತ್ತವಾದ ಹಾಗೂ ಇಲ್ಲಿಗೆ ಹೊಂದಿಕೊಳ್ಳುವ ಸ್ಥಳೀಯ ಅರಣ್ಯ ವೃಕ್ಷಗಳನ್ನು ಬೆಳೆಸಿ ಈ ಕಾಡಿನಲ್ಲಿರುವ ಜಲಾಶಯದ ಪ್ರದೇಶವನ್ನು ಕಾಪಾಡಲು ಕ್ರಮ ತೆಗೆದು ಕೊಳ್ಳಲಾಗುವುದೇ ?

ಉ) ಇಲ್ಲಿರುವ ಕಾಡು ಪ್ರಾಣಿಗಳು ಯಾವುವು ಹಾಗೂ ಅವುಗಳ ಅಭಿವೃದ್ಧಿಗೆ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?